ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ನೂರ ನಲವತ್ತೊಂದನೆಯ ಅಧಿವೇಶನ

ಮಂಗಳವಾರ, ದಿನಾಂಕ: 29ನೇ ಸೆಪ್ಟಂಬರ್, 2020

ರಾಜ್ಯದಲ್ಲಿ ನಡೆಯುತ್ತಿರುವ ಗಣಿಗಾರಿಕೆ ಮತ್ತು ಸಂಗ್ರಹ ರಾಜಧನ ಬಳಕೆ ಬಗ್ಗೆ

ಶ್ರೀ ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು):-

911 (1047) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ, ಯಾವ ಯಾವ ಭಾಗಗಳಲ್ಲಿ ಗಣಿಗಾರಿಕೆ ನಡೆಯುತ್ತಿದೆ; (ಪ್ರದೇಶ, ಗಣಿಗಾರಿಕೆಯ ಅದಿರು, ಪ್ರದೇಶ ವ್ಯಾಪ್ತಿ ಕುರಿತ ಪ್ರತ್ಯೇಕ ಮಾಹಿತಿ ಒದಗಿಸುವುದು)

(ಆ) ಕಳೆದ 3 ವರ್ಷಗಳ ಅವಧಿಯಲ್ಲಿ ಗಣಿಗಾರಿಕೆಯಿಂದ ಪಡೆಯಲಾದ ಅದಿರಿನ ಪ್ರಮಾಣ ಎಷ್ಟು; ಈ ಅದಿರು ಗಣಿಗಾರಿಕೆಯಿಂದ ರಾಜ್ಯಕ್ಕೆ ಸಂದಾಯವಾಗಿರುವ ರಾಜಧನ ಎಷ್ಟು; (ಪ್ರತ್ಯೇಕವಾರು ಮಾಹಿತಿ ಒದಗಿಸುವುದು)

(ಇ) ಅಧಿಕ ಪ್ರಮಾಣದ ರಾಜಧನವು ಈ ಅದಿರು ಗಣಿಗಾರಿಕೆಯಿಂದ ಸಂಗ್ರಹವಾಗಿದ್ದು, ಈ ಹಣವನ್ನು ಸಾರ್ವಜನಿಕ ಉದ್ದೇಶಗಳಿಗೆ ವಿನಿಯೋಗಿಸದೇ ಬ್ಯಾಂಕ್‌ನಲ್ಲಿ ಇಡುಗಂಟು ಇಟ್ಟಿರುವುದು ನಿಜವೇ; ಹಾಗಿದ್ದಲ್ಲಿ, ಹಣದ ಪ್ರಮಾಣ, ಬ್ಯಾಂಕ್ ವಿವರ ಹಾಗೂ ಇಡುಗಂಟಿನಿಂದ ಇದುವರೆಗೆ ಬಂದ ಬಡ್ಡಿ ಎಷ್ಟು ? (ಸಂಪೂರ್ಣ ಮಾಹಿತಿ ಒದಗಿಸುವುದು)